# <u>ವ್ಯರ್ಥ ವಲ್ಲವೇ ಜನುಮ ವ್ಯರ್ಥ ವಲ್ಲವೇ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 67.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 61.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 524.
4. **Note:** The lyrics given in the book in Ref. 2 (given without highlights) are almost similar to that of the singer. But the lyrics are different in the book in Ref. 1 above. Also here, there are totally 5 stanzas. They are given separately in green highlights. In Ref. 3, there are more stanzas than 5 stanzas and these lyrics are not considered here.

ರಾಗ: ಪೂರ್ವ ಕಲ್ಯಾಣಿ  ತಾಳ: ಆದಿ

ವ್ಯರ್ಥ ವಲ್ಲವೆ ಜನ್ಮ ವ್ಯರ್ಥ ವಲ್ಲವೆ  ॥ ಪ ॥
ಅರ್ಥಿಯಿಂದ ಹರಿಯ ನಾಮ ನಿತ್ಯ ಸ್ಮರಿಸದವರ ಜನ್ಮ  ॥ ಅಪ ॥

ಹರಿಯ ಸೇವೆ ಮಾಡದವನ
ಹರಿಯ ಗುಣಗಳ ಎಣಿಸದವನ
ಹರಿಯ ಕೊಂಡಾಡದವನ
ಹರಿ ತಿಳಿಯದವನ ಜನ್ಮ  ॥ 1 ॥

ದಾಸರೊಡನೆ ಆಡದವನ
ದಾಸರೊಡನೆ ಪಾಡದವನ
ದಾಸರ ಕೊಂಡಾಡದೆ ಹರಿ
ದಾಸನಾಗದವನ ಜನ್ಮ  ॥ 2 ॥

ಒಂದು ಶಂಖ ಉದಕ ತಂದು

ಚಂದದಿಂದ ಹರಿಗರ್ಪಿಸಿ
ತಂದೆ ಪುರಂದರ ವಿಠ್ಠಲನ್ನ
ಹೊಂದಿ ನೆನೆಯದವನ ಜನ್ಮ     ॥ 3 ॥

**Note:** These lyrics are as per the book in Ref. 1 above. There are 5 stanzans and are different from that of the lyrics in Ref.2. Hence, they are given separately in green highlights.

ರಾಗ: ತೋಡಿ                    ತಾಳ: ರೂಪಕ

ವ್ಯರ್ಥವಲ್ಲವೆ ಜನುಮ ವ್ಯರ್ಥವಲ್ಲವೆ     ॥ ಪ ॥

ತೀರ್ಥಪಾದನ ಭಜಿಸಿ ತಾ
ಕೃತಾರ್ಥನಾಗದವನ ಜನುಮ     ॥ ಅಪ ॥

ಒಂದು ಶಂಖ ಉದಕದಿಂದ
ಚೆಂದದಲಭಿಷೇಕ ಮಾಡಿ
ಗಂಧ ಪುಷ್ಪ ಹರಿಗೆ ಅರ್ಪಿಸಿ
ವಂದನೆ ಮಾಡದವನ ಜನುಮ     ॥ 1 ॥

ಮುಗುಳುದೆನೆಯ ಎಲೆ ತುಳಸಿ
ದಳಗಳ ತಂದು ಪ್ರೇಮದಿಂದ
ಜಗನ್ಮೋಹನ ಪೂಜೆಯ ಮಾಡಿ
ಚರಣಕೆರಗದವನ ಜನುಮ     ॥ 2 ॥

ಕಮಲ ಮಲ್ಲಿಗೆ ಸಂಪಿಗೆ ಜಾಜಿ
ವಿಮಲ ಕೇದಗೆ ಪ್ರೇಮದಿಂದ
ಕಮಲನಾಭನ ಅರ್ಚನೆ ಮಾಡಿ
ಕರವ ಮುಗಿಯದವನ ಜನುಮ     ॥ 3 ॥

ಪಂಚಭಕ್ಷ ಪಾಯಸ ಘೃತ
ಪಂಚಾಮೃತ ಹರಿಗರ್ಪಿಸದೆ

ಮುಂಚೆ ಉಂಡು ಹೊರಗೆ ತಾ
ಪ್ರಪಂಚ ಮಾಡುವವನ ಜನುಮ ॥ 4 ॥

ಸಜ್ಜನ ಸಂಗ ಮಾಡದವನ
ದುರ್ಜನ ಸಂಗವ ಬಿಡದವನ
ಅರ್ಜುನ ಸಖ ಪುರಂದರ
ವಿಠ್ಠಲನ್ನ ಭಜಿಸದವನ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ಮಾನವ ಜನ್ಮದ ಪರಮಪುರುಷಾರ್ಥವೆಂದರೆ ಪರಮಾತ್ಮನ ಪ್ರಸಾದವನ್ನು ಪಡೆದುಕೊಂಡು ಜೀವದ ಸ್ವರೂಪ ಗುಣಗಳನ್ನು ಮತ್ತೆ ಗಳಿಸಿಕೊಂಡು, ಲಿಂಗದೇಹವನ್ನು ಕಳೆದುಕೊಂಡು ಮುಕ್ತನಾಗಿ ಪರಮಾತ್ಮನ ಸನ್ನಿಧಿಯಲ್ಲಿ ಸೇವಾಭಾವದಿಂದ ನಿತ್ಯ ನೆಲಸುವುದು. ಮಾನವಜನ್ಮ ಒದಗಿರುವುದೇ ಈ ಪ್ರಯೋಜನದ ಸಾಧನೆಗೆಂಬ ಕಾರಣದಿಂದ ನಮ್ಮ ಶರೀರವನ್ನು ಸಾಧನ ಶರೀರವೆಂದು ಕರೆಯುತ್ತಾರೆ. 'ಮಾನವ ಜನ್ಮ ದೊಡ್ಡದು, ಇದ ಹಾನಿಮಾಡಬೇಡಿರಿ' ಎಂದು ದಾಸರು ಹೇಳಿರುವುದೂ ಇದೇ ಔಕಟ್ಟಿನಲ್ಲೇ. ಈ ಸಾಧನೆಗೆ ಅನುಕೂಲವಾಗುವಂತೆ, ಸತ್ಸಂಗ, ಹರಿಕಥಾ ಶ್ರವಣ, ಮಾಹಾತ್ಮ್ಯಜ್ಞಾನ, ನವವಿಧಭಕ್ತಿ ಇವನ್ನು ಮಾಡಬೇಕಾದುದು ಮನುಷ್ಯನ ಕರ್ತವ್ಯ.

**ತೀರ್ಥಪದ** = ಗಂಗೆಯನ್ನು ಪಾದದಲ್ಲಿ ಪಡೆದವ, ಶ್ರೀ ಹರಿ

**ಪಂಚ ಭಕ್ಷ** = ಭಕ್ಷ, ಭೋಜ್ಯ, ಚೋಷ್ಯ, ಲೋಹ್ಯ, ಪೇಯ್ಯ.

**ಪಂಚಾಮೃತ** = ಆಕಳ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸಕ್ಕರೆ

**ಪ್ರಪಂಚ** = ಸಂಸಾರ, ವ್ಯವಹಾರ

**ಅರ್ಜುನ ಸಖ** = ಶ್ರೀ ಕೃಷ್ಣ

**Classification:** Keerthane
**Ankita:** purandara vittala
**Location:** NA
**Category:** Krishna Stuti, Jeevanoddhara, Aartha Bhaava,

**Sub-Category:** janma, Krishna, niru, shankha, smarane, tirtha, bhajane, abhisheka, gandha, pushpa, tulasi, prema, pooje, padma, archane, kai, tuppa, amruta, oota, loka, jana, pandava,

**Pravachana:** NA

**Explanation:** NA